ದಿನಾಂಕ: 14-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲುಃ ಶ್ರೀ. ಎನ್.ಎಸ್.ಜಿ. ಪ್ರತಿವಾದಿ 1 ರಿಂದ 7 ರವರ ಪರ ವಕೀಲರಿಂದಃ</u>**

12. ದಾವಾ ಆಸ್ತಿಗಳಲ್ಲಿ ನೀರಾವರಿ ಸೌಲಭ್ಯ ಇದೆ ಎಂದು ತೋರಿಸಲು ದಾಖಲೆಗಳ ಇರುವುದಿಲ್ಲ. ನಾಗವ್ವ ಗಂಡ ಬಸಪ್ಪ ಅಂದರೆ 2 ರಿಂದ 4ನೇ ವಾದಿಯರ ತಾಯಿ ಇವರು ತಮ್ಮ ಮದುವೆ ಆದಾಗಿನಿಂದ ತಮ್ಮ ಗಂಡನ ಮನೆಯಲ್ಲಿಯೇ ವಾಸ ಇದ್ದಾರೆ ಎಂದರೆ ಸರಿ. ನನ್ನ ತಾಯಿ ನಾವು ಚಿಕ್ಕವರಿದ್ದಾಗಲೇ ತೀರಿಕೊಂಡಿರುತ್ತಾರೆ. ನಮ್ಮ ತಾಯಿ ಯಾವತ್ತೂ ದಾವಾ ಆಸ್ತಿಯ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾವುಗಳು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ.

13.ನನ್ನ ಸಂಬಂಧ 2 ಮತ್ತು 3ನೇ ವಾದಿಯರ ಜೊತೆ ಸರಿ ಇದೆ ಎಂದರೆ ಸರಿ. ಬಸನಿಂಗಪ್ಪ ಇವರ ಮರಣಾ ನಂತರ ವಾರಸಾ ಆಗುವ ಸಮಯದಲ್ಲಿ ಪ್ರತಿವಾದಿ 3 ಮತ್ತು 4 ತಕರಾರು ಮಾಡಿಲ್ಲ ಎಂದರೆ ಸರಿ. ಲಕ್ಕಪ್ಪನ ಹೆಂಡತಿ ಎಂದು ನನ್ನ ಹೆಸರು ದಾಖಲಾಗಿದೆ ಎಂದರೆ ಸರಿ. ನನ್ನ, ಪ್ರತಿವಾದಿ 1 ರಿಂದ 5 ರವರ ಹೆಸರು ದಾವಾ ಆಸ್ತಿಗಳ ಉತಾರಗಳಲ್ಲಿ ದಾಖಲಾಗಿರುವ ವಿಷಯ 3 ಮತ್ತು 4ನೇ ವಾದಿಯರಿಗೆ ಗೊತ್ತಿದೆ ಎಂದರೆ ಸರಿ. ದಾವಾ ಆಸ್ತಿಗಳ ಉತಾರದಲ್ಲಿ ಹೆಸರು ದಾಖಲಾಗಿರುವುದು ತಪ್ಪು ಇದೆ ಎಂದು ಹೇಳಿ 4ನೇ ವಾದಿ

ತಹಸೀಲ್ದಾರರಿಗೆ ತಕರಾರು ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ನಮ್ಮ ತಾಯಿಗೆ ಯಾವುದೇ ಹಕ್ಕು ಇರುವುದಿಲ್ಲ, ಅದೇ ರೀತಿ ನಮ್ಮ ತಾಯಿಯ ವಾರಸುದಾರರಾಗಿ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮ್ಮ ತಾಯಿಗೆ ಯಾವುದೇ ಹಕ್ಕು ಇಲ್ಲದೇ ಇದ್ದುದ್ದರಿಂದ ನಮ್ಮ ತಾಯಿ ಮಕ್ಕಳಾದ ನಾನು, ವಾದಿ 3 ಮತ್ತು 4 ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

14. ವಾಟ್ನಿ ಮಾಡಿಕೊಂಡ ಪ್ರಕಾರ ಭೀಮಪ್ಪನ ವಾರಸುದಾರರು ಮತ್ತು ಲಕ್ಕಪ್ಪನ ವಾರಸುದಾರರು ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ವಹಿವಾಟು ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. 2008ರಲ್ಲಿ ದಾವಾ ಆಸ್ತಿಗಳಲ್ಲಿ ಭೀಮಪ್ಪ ಮತ್ತು ಲಕ್ಕಪ್ಪ ಇವರ ವಾರಸುದಾರರ ನಡುವೆ ವಾಟ್ನಿ ಆಗಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ಆಸ್ತಿಯನ್ನು ಏನಾದರೂ ಮಾಡಿ ಹೊಡೆದುಕೊಳ್ಳಬೇಕೆಂದು ಹೇಳಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ